ಕರ್ನಾಟಕ ವಿಧಾನಸಭೆ
ಹದಿನಾರನೇ ವಿಧಾನಸಭೆ
ಆರನೇ ಅಧಿವೇಶನ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–17)**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53)ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ ಸಂ. 53)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 225ರ ಪ್ರತಿಯೋಜನೆ.-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ ಸಂ. 53)(ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 225ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"225. ಯಾವುದೇ ಬೀದಿಯನ್ನು ಸಾರ್ವಜನಿಕ ಬೀದಿಯೆಂದು ಘೋಷಿಸುವ ಅಧಿಕಾರ.-** (1) ಚರಂಡಿಗಳನ್ನೂ ಒಳಗೊಂಡಂತೆ ಒಂದು ಖಾಸಗಿ ಬೀದಿಯು, ಸಾರ್ವಜನಿಕ ಸುರಕ್ಷತೆ ಮತ್ತು ಆರೋಗ್ಯಕ್ಕೆ ಅಪಾಯವನ್ನೊಡ್ಡುವಂಥ ದುಃಸ್ಥಿತಿಯಲ್ಲಿದ್ದರೆ, ವಲಯ ಆಯುಕ್ತನು, ಖಾಸಗಿ ಬೀದಿಗೆ ಸಂಬಂಧಿಸಿದಂತೆ, ತನ್ನ ಸ್ವಇಚ್ಛೆಯಿಂದ, ಅಥವಾ ಸದರಿ ಖಾಸಗಿ ಬೀದಿಯ ಮಾಲೀಕರ, ಅಥವಾ ಅಂಥ ಬೀದಿಯ ಮುಂದಿರುವ ಅಥವಾ ಅದಕ್ಕೆ ಹೊಂದಿಕೊಂಡಿರುವ ಕಟ್ಟಡಗಳು ಅಥವಾ ಭೂಮಿಗಳ ಮಾಲೀಕರ ಮನವಿಯ ಮೇರೆಗೆ, ಸಾರ್ವಜನಿಕ ನೋಟಿಸಿನ ಮೂಲಕ ಮತ್ತು ಅಂಥ ಮಾಲೀಕರಿಗೆ ನೋಟಿಸು ನೀಡುವ ಮೂಲಕ, ಸದರಿ ಖಾಸಗಿ ಬೀದಿ ಅಥವಾ ಅದರ ಯಾವುದೇ ಭಾಗವನ್ನು ಸಾರ್ವಜನಿಕ ಬೀದಿ ಎಂದು ಘೋಷಿಸುವ ಆತನ ಉದ್ದೇಶವನ್ನು ತಿಳಿಯಪಡಿಸಬಹುದು. ತದನಂತರ, ಅಂಥ ಮಾಲೀಕರು ಅಥವಾ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳು, ಅಂಥ ಲಗತ್ತುಗೊಂಡ ಸಾರ್ವಜನಿಕ ನೋಟಿಸಿಗೆ, ಅದನ್ನು ಜಾರಿಗೊಳಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಸದರಿ ಉದ್ದೇಶಕ್ಕೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು. ಆಕ್ಷೇಪಣೆಗಳು ಯಾವುದಾದಾರೂ ಇದ್ದಲ್ಲಿ, ಅವುಗಳನ್ನು ಪರಿಗಣಿಸಿದ ತರುವಾಯ, ವಲಯ ಆಯುಕ್ತನು, ಅಂಥ ಬೀದಿ ಅಥವಾ ಅದರ ಯಾವುದೇ ಭಾಗವನ್ನು ಸಾರ್ವಜನಿಕ ಬೀದಿ ಎಂದು ಘೋಷಿಸಬಹುದು:

ಪರಂತು, ಅಂಥ ಖಾಸಗಿ ಬೀದಿಯು ಒಂದಕ್ಕಿಂತ ಹೆಚ್ಚು ವಲಯಗಳ ವ್ಯಾಪ್ತಿಗೆ ಬಂದರೆ, ಸಂಬಂಧಪಟ್ಟ ವಲಯಗಳ ಆಯುಕ್ತರು ಜಂಟಿಯಾಗಿ ನೋಟಿಸನ್ನು ಜಾರಿಗೊಳಿಸತಕ್ಕದ್ದು ಮತ್ತು ತದನಂತರ ಅಂಥ ರಸ್ತೆ ಅಥವಾ ಅದರ ಯಾವುದೇ ಭಾಗವನ್ನು ಸಾರ್ವಜನಿಕ ಬೀದಿ ಎಂದು ಘೋಷಿಸತಕ್ಕದ್ದು.

ಮತ್ತು ಪರಂತು, ಸಾರ್ವಜನಿಕ ಬೀದಿ ಎಂದು ಘೋಷಿಸಬೇಕಾದ ಖಾಸಗಿ ಬೀದಿಯು ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಬೀದಿಯೊಂದಿಗೆ ಸಂಪರ್ಕವನ್ನು ಹೊಂದಿರತಕ್ಕದ್ದು.

(2) ಒಂದು ಖಾಸಗಿ ಬೀದಿ ಅಥವಾ ಅನ್ಯಥಾ ಹಿಂದಿನ ಭೂ ಮಾಲೀಕನು ಬರೆದುಕೊಟ್ಟ ಕ್ರಯಪತ್ರದಲ್ಲಿ ಆತನು ಅದನ್ನು ಬೀದಿ ಎಂದು ತೋರಿಸಿದ್ದು, ಹಾಗೂ ಅದರ ಆಧಾರದ ಮೇಲೆ ಈಗಿನ ಭೂ ಮಾಲೀಕನು ಹೊಂದಿಕೊಂಡಿರುವಂಥ ಕಟ್ಟಡ ನಿವೇಶನಗಳನ್ನು ಮಾರಾಟ ಮಾಡುವ ಮೂಲಕ ಅಂಥ ಬೀದಿ ಅಥವಾ ರಸ್ತೆಯ ಪ್ರಯೋಜನವನ್ನು ಪಡೆದುಕೊಂಡಿರುವ ಭೂ ಮಾಲೀಕನು ಅದಕ್ಕೆ ಹೊಂದಿಕೊಂಡಿರುವಂಥ ಕಟ್ಟಡ ನಿವೇಶನಗಳನ್ನು ಪಡೆದುಕೊಂಡಿದ್ದರೆ, ಮತ್ತು ಅಂಥ ಬೀದಿಗೆ ಹೊಂದಿಕೊಂಡಿರುವ ನಿವೇಶನದ ಮಾಲೀಕರ ಮನವಿಯ ಮೇರೆಗೆ ಆನಂತರದಲ್ಲಿ ಆ ಬೀದಿಯನ್ನು (1)ನೇ ಉಪ-ಪ್ರಕರಣದಡಿ ಸಾರ್ವಜನಿಕ ಬೀದಿ ಎಂದು ಘೋಷಿಸಲಾಗಿದ್ದರೆ, ಅಂಥ ಸಂದರ್ಭದಲ್ಲಿ, ಭೂ ಮಾಲೀಕನು, ಭೂ ಆರ್ಜನೆ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ನ್ಯಾಯೋಚಿತ ನಷ್ಟಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ 30)ರ ಅಡಿಯಲ್ಲಿ ಅಥವಾ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 11)ರ 14-ಬಿ ಪ್ರಕರಣದಡಿಯಲ್ಲಿನ ಅಭಿವೃದ್ಧಿ ಹಕ್ಕು ಪ್ರಮಾಣಪತ್ರಗಳನ್ನು ಒಳಗೊಂಡಂತೆ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಯಾವುದೇ ರೀತಿಯ ನಷ್ಟಪರಿಹಾರಕ್ಕೆ ಅರ್ಹನಾಗಿರತಕ್ಕದ್ದಲ್ಲ.

**ವಿವರಣೆ:-** ಈ ಪ್ರಕರಣದ ಉದ್ದೇಶಕ್ಕಾಗಿ,-

(i) "ಹಿಂದಿನ ಭೂ ಮಾಲೀಕ" ಎಂದರೆ, ನಿವೇಶನಗಳನ್ನು ಮಾರಾಟ ಮಾಡುವ ಸಮಯದಲ್ಲಿ ಕೃಷಿ ಅಥವಾ ಪರಿವರ್ತಿತ ಭೂಮಿಯು ಯಾರ ಹೆಸರಿನಲ್ಲಿತ್ತೋ ಆ ವ್ಯಕ್ತಿ, ಮತ್ತು ಆತನ ಅಧೀನದಲ್ಲಿ ಅಥವಾ ಆತನ ಮೂಲಕ ಕ್ಲೇಮು ಮಾಡುವ ಎಲ್ಲಾ ಇತರ ವ್ಯಕ್ತಿಗಳನ್ನು ಒಳಗೊಳ್ಳುವುದು.

(ii) "ಸಾರ್ವಜನಿಕ ಬೀದಿ" ಎಂದರೆ, ಪಾಲಿಕೆ ಅಥವಾ ಸರ್ಕಾರದಿಂದ ಅಥವಾ ಯಾವುದೇ ಸಾರ್ವಜನಿಕ ಪ್ರಾಧಿಕಾರಗಳಿಂದ ನಿರ್ವಹಿಸಲಾಗುತ್ತಿರುವ, ಸಾರ್ವಜನಿಕರು ಮಾರ್ಗಕ್ಕಾಗಿ ಹಕ್ಕನ್ನು ಹೊಂದಿರುವ, ಸಂಪರ್ಕ ರಸ್ತೆಯಾಗಿರುವ ಅಥವಾ ಆಗಿಲ್ಲದ ಯಾವುದೇ ಬೀದಿ, ರಸ್ತೆ, ಚೌಕ, ಆವರಣ, ಗಲ್ಲಿ, ಹಾದಿ ಅಥವಾ ಚಾಲನಾ ಪಥ; ಮತ್ತು ಅದು:-

(ಎ) ಯಾವುದೇ ಸಾರ್ವಜನಿಕ ಸೇತುವೆ ಅಥವಾ ಕಿರುದಾರಿಯ ಮೇಲಿನ ರಸ್ತೆ;

(ಬಿ) ಅಂಥ ಯಾವುದೇ ಬೀದಿ, ಸಾರ್ವಜನಿಕ ಸೇತುವೆ ಅಥವಾ ಕಿರುದಾರಿಗೆ
ಹೊಂದಿಕೊಂಡಿರುವ ಕಾಲುದಾರಿ; ಮತ್ತು

(ಸಿ) ಅಂಥ ಯಾವುದೇ ಬೀದಿ, ಸಾರ್ವಜನಿಕ ಸೇತುವೆ ಅಥವಾ ಕಿರುದಾರಿಗೆ ಹೊಂದಿಕೊಂಡಿರುವ ಚರಂಡಿಗಳು ಮತ್ತು ಪಕ್ಕದಲ್ಲಿರುವ ಸ್ವತ್ತು, ಅದು ಖಾಸಗಿ ಸ್ವತ್ತಾಗಿರಲಿ ಅಥವಾ ಸರ್ಕಾರಿ ಅಥವಾ ಪಾಲಿಕೆಗೆ ಸೇರಿರುವ ಸ್ವತ್ತಾಗಿರಲಿ, ಆ ಸ್ವತ್ತಿನ ಗಡಿಗಳವರೆಗಿನ ರಸ್ತೆಯ ಯಾವುದೇ ಬದಿಯಲ್ಲಿರುವ ಯಾವುದೇ ಪಾದಚಾರಿ ಮಾರ್ಗ, ವರಾಂಡ ಅಥವಾ ಇತರ ರಚನೆಗಳಿಂದ ಆವೃತಗೊಂಡ ಅಥವಾ ಆವೃತಗೊಂಡಿಲ್ಲದ ಭೂಮಿ,

- ಇವುಗಳನ್ನು ಒಳಗೊಳ್ಳುತ್ತದೆ.

**3. 226ನೇ ಪ್ರಕರಣದ ಪ್ರತಿಯೋಜನೆ. –** ಮೂಲ ಅಧಿನಿಯಮದ, 226ನೇ ಪ್ರಕರಣದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"**226. ತನ್ನದೇ ಲೋಪದಿಂದಾಗಿ ಕಾಮಗಾರಿಯನ್ನು ಕೈಗೊಳ್ಳಲು ಅಥವಾ ಮುಂದುವರೆಸಲು ಆದೇಶಿಸುವ ವಲಯ ಆಯುಕ್ತನ ಅಧಿಕಾರ.-** (1) 225ನೇ ಪ್ರಕರಣದಡಿಯಲ್ಲಿ ನೋಟಿಸನ್ನು ನೀಡಿದ ಮೇಲೆ, ಖಾಸಗಿ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವ ಉದ್ದೇಶದಿಂದ ಹಿಂದೆಸರಿಯಲು ಆಕ್ಷೇಪಣೆಗಳು ಅಥವಾ ಯಾವುದೇ ಇತರ ಕಾರಣವಿದ್ದು, ಆದರೆ ಅನುಭೋಗದ ಹಕ್ಕಿನಂತೆ ಸದರಿ ಬೀದಿಯನ್ನು ಬಳಸುವ ವ್ಯಕ್ತಿಗಳ ಪ್ರಯೋಜನಕ್ಕಾಗಿ ಬೀದಿ ಬದಿಯ ಚರಂಡಿಗಳನ್ನು ಒಳಗೊಂಡಂತೆ ಆ ಖಾಸಗಿ ಬೀದಿ ಅಥವಾ ಅದರ ಭಾಗವನ್ನು ಸುಧಾರಿಸುವುದು, ಅಭಿವೃದ್ಧಿಪಡಿಸುವುದು ಅಥವಾ ನಿರ್ವಹಿಸುವುದು ಅಗತ್ಯವಾಗಿದ್ದಲ್ಲಿ, ವಲಯ ಆಯುಕ್ತನು, ಆತನ ಅಭಿಪ್ರಾಯದಲ್ಲಿ ಅವಶ್ಯವೆನಿಸಬಹುದಾದ ಯಾವುದೇ ಕಾಮಗಾರಿಯನ್ನು ನೋಟೀಸಿನ ಮೂಲಕ ಮತ್ತು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗೆ ಕೈಗೊಳ್ಳುವಂತೆ ಅಂಥ ಮಾಲೀಕರಿಗೆ ನಿರ್ದೇಶನ ನೀಡಬಹುದು.

(2) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ಕಾಮಗಾರಿಯು ಮುಗಿಯದಿದ್ದರೆ, ವಲಯ ಆಯುಕ್ತನು, ಆತನು ಸೂಕ್ತವೆಂದು ಭಾವಿಸಿದಲ್ಲಿ ಅದನ್ನು ಕಾರ್ಯಗತಗೊಳಿಸುವುದು ಮತ್ತು

ವ್ಯಯಿಸಿದ ವೆಚ್ಚಗಳನ್ನು ವಲಯ ಆಯುಕ್ತನು ಇತ್ಯರ್ಥಪಡಿಸಬಹುದಾದಂತೆ ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಅಂಥ ಸ್ವತ್ತುಗಳ ಮಾಲೀಕರಿಂದ ಪಾವತಿಸಿಕೊಳ್ಳತಕ್ಕದ್ದು:

ಪರಂತು, ಪಾವತಿಸಬೇಕಾದ ವೆಚ್ಚಗಳನ್ನು ಪಾವತಿಸದಿದ್ದಲ್ಲಿ, ಆಸ್ತಿ ತೆರಿಗೆಯ ಬಾಕಿಗಳಂತೆ ಮತ್ತು ಆಸ್ತಿ ತೆರಿಗೆ ಬಾಕಿಗಳನ್ನು ವಸೂಲು ಮಾಡುವುದಕ್ಕಾಗಿ ನಿಯಮಿಸಬಹುದಾದಂಥ ರೀತಿಯಲ್ಲಿ ವಸೂಲು ಮಾಡತಕ್ಕದ್ದು.

(3) ವಲಯ ಆಯುಕ್ತನು ಉಪ-ಪ್ರಕರಣ (2)ರ ಅನುಸಾರವಾಗಿ ಕಾಮಗಾರಿಯನ್ನು ಕೈಗೊಂಡಲ್ಲಿ, ಆತನು ಮಾಲೀಕರ ಮನವಿಯ ಮೇರೆಗೆ ಅಂಥ ಬೀದಿಯನ್ನು ಸಾರ್ವಜನಿಕ ಬೀದಿ ಎಂದು ಘೋಷಿಸುವುದು ಮತ್ತು ತದನಂತರ ಆ ಬೀದಿಯು ಪಾಲಿಕೆಯಲ್ಲಿ ನಿಹಿತವಾಗತಕ್ಕದ್ದು.

**4. 240ಎ ಪ್ರಕರಣದ ತಿದ್ದುಪಡಿ. -** ಮೂಲ ಅಧಿನಿಯಮದ, 240ಎ ಪ್ರಕರಣದಲ್ಲಿ, -

(i) ಉಪ-ಪ್ರಕರಣ (2) ರಲ್ಲಿ, "ಮುಖ್ಯ ಆಯುಕ್ತನು" ಎಂಬ ಪದಗಳ ಬದಲಾಗಿ "ಪಾಲಿಕೆಯು"

ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(ii) ಉಪ-ಪ್ರಕರಣ (3)ರಲ್ಲಿನ, (ಎ) ಖಂಡದಲ್ಲಿ, -

(ಎ) ಉಪ-ಖಂಡ (ಇ)ರಲ್ಲಿ, "ಶೇಕಡ 1.0 ರೊಂದಿಗೆ" ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ "ಶೇಕಡ 0.10 ರೊಂದಿಗೆ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಬಿ) ಉಪ-ಖಂಡ (ಜೆ) ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಕೆ) ವಸತಿ ಬಳಕೆಗಳಿಗಾಗಿ ಶುಲ್ಕ ಮತ್ತು ದಂಡಗಳ ಗರಿಷ್ಠಮಿತಿಯು ಉಪ-ಖಂಡ (ಎ) ದಿಂದ (ಜೆ) ವರೆಗೆ ನಿರ್ದಿಷ್ಟಪಡಿಸಿದ ಮೌಲ್ಯಗಳ 2/3ರಷ್ಟು ಭಾಗವಾಗಿರತಕ್ಕದ್ದು."

**5. 248ನೇ ಪ್ರಕರಣದ ತಿದ್ದುಪಡಿ. -** ಮೂಲ ಅಧಿನಿಯಮದ, 248ನೇ ಪ್ರಕರಣದಲ್ಲಿನ (4)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(5) ಯಾವುದೇ ಕಟ್ಟಡ ಅಥವಾ ಯಾವುದೇ ಕಾಮಗಾರಿಯನ್ನು ಕೈಗೊಳ್ಳುವ ನಿರ್ಮಾಣ ಅಥವಾ ರಚನೆಯನ್ನು ಕೆಡಹುವ ಅಥವಾ ನಿಲ್ಲಿಸುವ ಆದೇಶವನ್ನು ಮಾಡುವ ಮೊದಲು ಅಥವಾ ನಂತರ ಯಾವುದೇ ಸಮಯದಲ್ಲಿ, ಅಂಥ ನಿರ್ಮಾಣ ಅಥವಾ ರಚನೆಯನ್ನು ಬಳಸುವುದರಿಂದ ತಡೆಯುವುದಕ್ಕಾಗಿ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ಅಂಥ ರಚನೆ ಅಥವಾ ಕಾಮಗಾರಿ ಕೈಗೊಳ್ಳಲಾಗುತ್ತಿರುವ ಅಥವಾ ಪೂರ್ಣಗೊಳ್ಳುತ್ತಿರುವ ಆವರಣಗಳಲ್ಲಿನ ಅಂಥ ನಿರ್ಮಾಣ ಅಥವಾ ರಚನೆಗೆ ಮೊಹರನ್ನು(ಸೀಲು) ಹಾಕಲು ನಿರ್ದೇಶಿಸುವ ಆದೇಶವನ್ನು ಮಾಡುವುದು ವಲಯ ಆಯುಕ್ತನಿಗೆ ಕಾನೂನುಬದ್ಧವಾಗಿರತಕ್ಕದ್ದು.

(6) ಯಾವುದೇ ರಚನೆ ಅಥವಾ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿರುವ ಯಾವುದೇ ಆವರಣಗಳಲ್ಲಿ ಯಾವುದೇ ರಚನೆ ಅಥವಾ ಕಾಮಗಾರಿಯನ್ನು ಸೀಲು (ಮೊಹರು) ಮಾಡಿದರೆ, ವಲಯ ಆಯುಕ್ತನು, ಈ ಅಧಿನಿಯಮದ ಉಪಬಂಧದ ಅನುಸಾರ ಅಂಥ ರಚನೆ ಅಥವಾ ಕಾಮಗಾರಿಯನ್ನು ಕೆಡುಹುವ ಉದ್ದೇಶಕ್ಕಾಗಿ, ಅಂಥ ಯಾವುದೇ ಕಾಮಗಾರಿಯ ನಿರ್ಮಾಣ ಅಥವಾ ರಚನೆಯನ್ನು ಸೀಲು (ಮೊಹರು) ಹಾಕಲು ನಿರ್ದೇಶಿಸಿದ ಆದೇಶವನ್ನು ತೆಗೆದುಹಾಕಬಹುದು;

(i) ವಲಯ ಆಯುಕ್ತನು ಮಾಡಿದ ಆದೇಶದ ಹೊರತು, ಯಾರೇ ವ್ಯಕ್ತಿಯು ಅಂಥ ಸೀಲನ್ನು ತೆಗೆದುಹಾಕತಕ್ಕದ್ದಲ್ಲ; ಮತ್ತು

(ii) ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದಾಗ್ಯೂ, ಅಂಥ ಸೀಲು ಹಾಕುವ ಆದೇಶದ ವಿರುದ್ಧ ಯಾವುದೇ ಅಪೀಲನ್ನು ಮಾಡತಕ್ಕದ್ದಲ್ಲ."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 53)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ,-

(i) ಯಾವುದೇ ಬೀದಿಯನ್ನು ಸಾರ್ವಜನಿಕ ಬೀದಿ ಎಂದು ಘೋಷಿಸಲು;

(ii) ಬಿಬಿಎಂಪಿ ಪ್ರದೇಶದಲ್ಲಿರುವ ಖಾಸಗಿ ಬೀದಿಗಳ ಅಭಿವೃದ್ಧಿಯನ್ನು ಖಚಿತಪಡಿಸುವುದು;

(iii) ಭಾರತ ಸಂವಿಧಾನದ 243ಎಕ್ಸ್ ಅನುಚ್ಛೇದದ ಅನುಸಾರ ಶುಲ್ಕ, ಲೆವಿ ಅಥವಾ ದಂಡದ ದರಗಳನ್ನು ನಿಗದಿಪಡಿಸುವುದಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪಾಲಿಕೆಯು ತೀರ್ಮಾನ ಕೈಗೊಳ್ಳುವುದನ್ನು ಸಾಧ್ಯವಾಗಿಸುವುದು;

(iv) ಗರಿಷ್ಠಮಿತಿಯನ್ನು ಕಡಿಮೆಗೊಳಿಸುವುದು ಮತ್ತು ಕಟ್ಟಡ ಲೈಸೆನ್ಸು, ಪ್ರಾರಂಭ ಪ್ರಮಾಣ ಪತ್ರ ಮತ್ತು ಸ್ವಾಧೀನ ಪ್ರಮಾಣ ಪತ್ರಗಳಿಗಾಗಿ ಪರಿಶೀಲನಾ ಶುಲ್ಕದೊಂದಿಗೆ ಅನುರೂಪವಾದ ಶುಲ್ಕವನ್ನು ತರುವುದು;

(v) ನಿವಾಸಿ ಕಟ್ಟಡ ಅನುಮತಿಗಾಗಿ, ಸಂದಾಯ ಮಾಡಬೇಕಾದ ಶುಲ್ಕದರದ ಮೇಲಿನ ಗರಿಷ್ಠಮಿತಿಯನ್ನು ಕಡಿಮೆಗೊಳಿಸುವುದು;

(vi) ಅನಧಿಕೃತ ನಿರ್ಮಾಣವನ್ನು ತಡೆಗಟ್ಟುವುದು ಮತ್ತು ಅನಧಿಕೃತ ಕಟ್ಟಡ ಅಥವಾ ಅದರ ಭಾಗವನ್ನು ಬಳಸುವುದರಿಂದ ಮಾಲೀಕ ಅಥವಾ ಇತರ ವ್ಯಕ್ತಿಯನ್ನು ನಿರ್ಬಂಧಿಸುವುದು;

(vii) ಇದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡುವುದು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಳ್ಳುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ**

| | |
|---|---|
| **ಖಂಡ-3** | 2ನೇ ಉಪ ಖಂಡವು, ಸ್ವತ್ತಿನ ಮಾಲೀಕರಿಂದ ಸ್ವತ್ತು ತೆರಿಗೆ ಬಾಕಿಯನ್ನು ವಸೂಲು ಮಾಡುವ ವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಡಿ.ಕೆ. ಶಿವಕುಮಾರ್**
ಉಪ ಮುಖ್ಯಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

# ಅನುಬಂಧ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿನಿಯಮ, 2020

## (2020ರ ಕರ್ನಾಟಕ ಅಧಿನಿಯಮ ಸಂಖ್ಯೆ: 53)ರ ಉದ್ಧೃತ ಭಾಗ

**XX XX XX**

**225**. **ಕಾಮಗಾರಿಯನ್ನು ಕಾರ್ಯಗತಗೊಳಿಸುವಂತೆ ಆದೇಶಿಸಲು ಅಥವಾ ಅದಕ್ಕೆ ತಪ್ಪಿದಲ್ಲಿ ತಾವೇ ಕಾರ್ಯಗತಗೊಳಿಸಲು ವಲಯ ಆಯುಕ್ತರ ಅಧಿಕಾರ**.- (1) ವಲಯ ಆಯುಕ್ತರಿಗೆ ಸಮಾಧಾನವಾಗುವಂತೆ ಯಾವುದೇ ಖಾಸಗಿ ಬೀದಿಯನ್ನು ಅಥವಾ ಅದರ ಭಾಗವನ್ನು ಮಟ್ಟ ಮಾಡದಿದ್ದರೆ, ಅದಕ್ಕೆ ನೆಲಗಟ್ಟು ಮಾಡದಿದ್ದರೆ, ಜಲ್ಲಿ ಹಾಕದಿದ್ದರೆ, ಚಪ್ಪಡಿ ಹಾಸದಿದ್ದರೆ, ಕಾಲುವೆ ಮಾಡದಿದ್ದರೆ, ಒಳಚರಂಡಿಯನ್ನು ಮಾಡದಿದ್ದರೆ, ಚರಂಡಿಯನ್ನು ಮಾಡದಿದ್ದರೆ, ನಿರ್ಮಲೀಕರಿಸದಿದ್ದರೆ ಅಥವಾ ದೀಪದ ವ್ಯವಸ್ಥೆ ಮಾಡಿಲ್ಲದಿದ್ದರೆ ಆತನು ನೋಟೀಸಿನ ಮೂಲಕ, ಅಂಥ ಬೀದಿಯ ಅಥವಾ ಅದರ ಭಾಗದ ಮಾಲೀಕರನ್ನು ಮತ್ತು ಆ ಭೂಮಿಯ ಮತ್ತು ಅದರ ಮೇಲಿನ ಕಟ್ಟಡದ ಮಾಲೀಕರು ಬೇರೆ ಬೇರೆಯವರಾಗಿರುವ ಸಂದರ್ಭಗಳಲ್ಲಿ, ಆ ಭೂಮಿ ಮತ್ತು ಕಟ್ಟಡ ಇವೆರಡರ ಮಾಲೀಕರೂ ಸೇರಿದಂತೆ ಅಂಥ ಬೀದಿಗೆ ಅಥವಾ ಅದರ ಭಾಗಕ್ಕೆ ಮುಖ ಮಾಡಿರುವ ಅಥವಾ ಅಂಥ ಬೀದಿಗೆ ಅಥವಾ ಅದರ ಭಾಗಕ್ಕೆ ಲಗತ್ತಾಗಿರುವ ಕಟ್ಟಡಗಳ ಅಥವಾ ಭೂಮಿಗಳ ಮಾಲೀಕರನ್ನು, ಆತನ ಅಭಿಪ್ರಾಯದಲ್ಲಿ ಅವಶ್ಯವಾಗಬಹುದಾದ ಯಾವುದೇ ಕಾಮಗಾರಿಯನ್ನು ಮತ್ತು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಕಾರ್ಯಗತಗೊಳಿಸುವಂತೆ ಅಗತ್ಯಪಡಿಸಬಹುದು.

(2) ಅಂಥ ಕಾಮಗಾರಿಯನ್ನು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಕಾರ್ಯಗತಗೊಳಿಸದಿದ್ದರೆ, ವಲಯ ಆಯುಕ್ತರು, ತಾವು ಸೂಕ್ತ ಎಂದು ಭಾವಿಸಿದರೆ, ಆ ಕಾಮಗಾರಿಯನ್ನು ಕಾರ್ಯಗತಗೊಳಿಸಬಹುದು ಮತ್ತು ಅದಕ್ಕೆ ತಗಲಿದ ವೆಚ್ಚಗಳನ್ನು ವಲಯ ಆಯುಕ್ತರು ನಿರ್ಧರಿಸಬಹುದಾದಂಥ ಪ್ರಮಾಣಗಳಲ್ಲಿ (1)ನೇ ಉಪ-ಪ್ರಕರಣದಲ್ಲಿ ತಿಳಿಸಿದ ಮಾಲೀಕನು ಸಂದಾಯ ಮಾಡತಕ್ಕದ್ದು.

**XX XX XX**

**226. ಬೀದಿಗಳನ್ನು ಸಾರ್ವಜನಿಕವೆಂದು ಘೋಷಿಸಬೇಕಾದ ಮಾಲೀಕನ ಹಕ್ಕು**.- ವಲಯ ಆಯುಕ್ತರು, 225ನೇ ಪ್ರಕರಣದ ಅನುಸಾರವಾಗಿ ಕಾಮಗಾರಿಯನ್ನು ಕೈಗೊಂಡರೆ ಬಹುಪಾಲು ಮಾಲೀಕರ ಮನವಿಯ ಮೇರೆಗೆ ಆತನು ಅಂಥ ಬೀದಿಯನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವುದು ಹಾಗೂ ಆನಂತರ ಬೀದಿಯು ಪಾಲಿಕೆಯಲ್ಲಿ ನಿಹಿತಗೊಳ್ಳತಕ್ಕದ್ದು.

**XX XX XX**

**240ಎ. ಕರಗಳ ವಿಧಿಸುವಿಕೆ, ನಿರ್ಬಂಧ ಮತ್ತು ಷರತ್ತು.-**

**XX XX XX**

(2) ಮುಖ್ಯ ಆಯುಕ್ತನು, ಶುಲ್ಕ ಅಥವಾ ದಂಡ ವಿಧಿಸುವಿಕೆಗಾಗಿ ದರಗಳನ್ನು ನಿಗದಿಪಡಿಸುವಾಗ, ತಾನು ಯುಕ್ತವೆಂದು ಭಾವಿಸಬಹುದಾದಂತೆ, ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದ ಎಲ್ಲಾ ವೆಚ್ಚಗಳನ್ನು ಮತ್ತು ಅನುಮೋದನೆಯ ನೀಡಿಕೆಯನ್ನು ಪರಿಗಣಿಸತಕ್ಕದ್ದು.

(3) ಮುಖ್ಯ ಆಯುಕ್ತನು, ನಕ್ಷೆಯನ್ನು ಅನುಮೋದಿಸುವುದಕ್ಕಾಗಿ ಅಥವಾ ಮಂಜೂರು ಮಾಡುವುದಕ್ಕಾಗಿ ಅಥವಾ ಪ್ರಾರಂಭ ಪ್ರಮಾಣಪತ್ರ ಅಥವಾ ಪೂರ್ಣಗೊಳಿಸಿದ ಪ್ರಮಾಣಪತ್ರ ನೀಡುವುದಕ್ಕಾಗಿ,-

**(ಎ)** ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ ಉಪಬಂಧಗಳ ಅಡಿಯಲ್ಲಿ ಸ್ಟಾಂಪು ಮತ್ತು ನೋಂದಣಿ ಇಲಾಖೆಯು ನಿಗದಿಪಡಿಸಿದ ಮಾರ್ಗಸೂಚಿ ಮೌಲ್ಯವನ್ನಾಧರಿಸಿದಂಥ ದರಗಳಲ್ಲಿ ಈ ಮುಂದಿನ ಶುಲ್ಕವನ್ನು ವಿಧಿಸಬಹುದು ಮತ್ತು ವಸೂಲು ಮಾಡಬಹುದು, ಎಂದರೆ:-

(ಎ) ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.30 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಲೈಸನ್ಸ್ ಅನ್ನು ನೀಡುವುದಕ್ಕಾಗಿ ಶುಲ್ಕ;

(ಬಿ) ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.25 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಸಾರ್ವಜನಿಕ ರಸ್ತೆಗಳ ನಿರ್ವಹಣೆಗಾಗಿ ಅಥವಾ ಕಟ್ಟಡ ನಿರ್ಮಾಣದ ಅವಧಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ನಿರ್ಮಾಣ ಸಾಮಗ್ರಿಗಳನ್ನು ಸಂಗ್ರಹಿಸುವುದಕ್ಕಾಗಿ ಶುಲ್ಕ ಎಂದರೆ., ನೆಲಬಾಡಿಗೆ;

(ಸಿ) ಮಂಜೂರಾದ ನಕ್ಷೆಗನುಸಾರವಾಗಿ(Plan) ನಿರ್ಮಾಣವನ್ನು ಖಚಿತಪಡಿಸಿಕೊಳ್ಳಲು ವಲಯ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಭದ್ರತಾ ಠೇವಣಿ;

(ಡಿ) ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.20 ರೊಂದಿಗೆ, ಪ್ರಸ್ತಾವಿತ ಮೇಲ್ಪಾಯ (plinth) ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಪ್ರಾರಂಭ ಪ್ರಮಾಣ ಪತ್ರಕ್ಕಾಗಿ ಶುಲ್ಕ;

(ಇ) ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 1.0 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಪೂರ್ಣಗೊಳಿಸಿದ ಪ್ರಮಾಣ ಪತ್ರಕ್ಕಾಗಿ ಶುಲ್ಕ;

(ಎಫ್) ಈ ಅಧಿನಿಯಮ ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರಡಿಯಲ್ಲಿ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಡಿಯಲ್ಲಿ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಶುಲ್ಕ;

(ಜಿ) ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.10 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ಪರಿಶೀಲನಾ ಶುಲ್ಕ;

(ಎಚ್) ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ಖಾಲಿ ನಿವೇಶನದ ಮಾರ್ಗಸೂಚಿ ಮೌಲ್ಯದ ಶೇಕಡ 0.25 ರೊಂದಿಗೆ, ಪ್ರಸ್ತಾವಿತ ಕಟ್ಟಡ ನಿರ್ಮಾಣ ವಿಸ್ತೀರ್ಣವನ್ನು ಗುಣಿಸಿ ಅದನ್ನು ಮೀರದಂಥ ದರದಲ್ಲಿ ನಿರ್ಮಾಣದ ಪ್ರಾರಂಭದಲ್ಲಿ ಪ್ರಾರಂಭ ಪ್ರಮಾಣ ಪತ್ರವನ್ನು ಪಡೆಯದಿದ್ದರೆ ಪೂರ್ಣಗೊಳಿಸಿದ ಪ್ರಮಾಣ ಪತ್ರವನ್ನು ನೀಡುವ ಸಮಯದಲ್ಲಿ ವಿದಿಸುವ ದಂಡ;

(ಐ) ಅಧಿನಿಯಮದಡಿಯಲ್ಲಿ ಅನುಮತಿಸಲಾದ ವ್ಯಾಪ್ತಿಯವರೆಗೆ ನಿರ್ಮಾಣವನ್ನು ಉಲ್ಲಂಘಿಸಿದ ಅಥವಾ ವ್ಯತ್ಯಾಸಗೊಳಿಸಿದ ಭಾಗದ ಸಕ್ರಮಾತಿಗಾಗಿ ನಿವೇಶನದ ಉಲ್ಲಂಘಿತ ಭಾಗಕ್ಕೆ ಮಾರ್ಗಸೂಚಿ ಮೌಲ್ಯದ ಶೇಕಡ 35ರಷ್ಟನ್ನು ಮೀರದಂಥ ದರದಲ್ಲಿ ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣದಡಿಯಲ್ಲಿ ದಂಡ; ಮತ್ತು

(ಜೆ) ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಶುಲ್ಕ."

**XX XX XX**

**248. ಕಾನೂನುಬಾಹಿರವಾಗಿ ಪ್ರಾರಂಭಿಸಿದ, ನಿರ್ವಹಿಸುತ್ತಿರುವ ಅಥವಾ ಪೂರ್ಣಗೊಳಿಸಿದ ಕಟ್ಟಡಗಳ ಅಥವಾ ಬಾವಿಯ ಕಾಮಗಾರಿಯನ್ನು ಕೆಡವಿಹಾಕುವುದು ಅಥವಾ ಬದಲಾಯಿಸುವುದು**.-

**XX XX XX**

(4) 240ನೇ ಪ್ರಕರಣದ ಉಪಬಂಧಗಳಿಗೆ ತದ್ವಿರುದ್ಧವಾಗಿ ಯಾವುದೇ ಕಟ್ಟಡದ ಅಥವಾ ಗುಡಿಸಲಿನ ನಿರ್ಮಾಣವನ್ನು ಅಥವಾ ಪುನರ್‌ನಿರ್ಮಾಣವನ್ನು ಪ್ರಾರಂಭಿಸಿದ್ದರೆ ಮತ್ತು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಮುಖ್ಯ ಆಯುಕ್ತರು ಅಭಿಪ್ರಾಯಪಟ್ಟರೆ, ಆಗ, ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, (2)ನೇ ಉಪಪ್ರಕರಣದ ಮೇರೆಗೆ, ಕೊಡಬೇಕಾದ ನೋಟೀಸು ಇಪ್ಪತ್ತನಾಲ್ಕು ಗಂಟೆಗಳಿಗಿಂತ ಕಡಿಮೆ ಅವಧಿಯದಾಗಿರತಕ್ಕದ್ದಲ್ಲ ಮತ್ತು ಯಾವ ಕಟ್ಟಡಕ್ಕೆ ಅಥವಾ ಗುಡಿಸಲಿಗೆ ಆ ನೋಟೀಸು ಸಂಬಂಧಪಡುವುದೋ ಆ ಕಟ್ಟಡದ ಅಥವಾ ಗುಡಿಸಲಿನ ಎದ್ದು ಕಾಣುವ ಯಾವುದೇ ಭಾಗದಲ್ಲಿ ಅದನ್ನು ಅಂಟಿಸಿದ್ದರೆ ಮತ್ತು ಡಂಗುರದ ಮೂಲಕ ಅಂಥ ಕಟ್ಟಡದ ಅಥವಾ ಗುಡಿಸಲಿನ ಹತ್ತಿರ ಸಾರುವ ಮೂಲಕ ಪ್ರಕಟಿಸಿದರೆ ಆ ನೋಟಿಸನ್ನು ಕ್ರಮಬದ್ಧವಾಗಿ ಜಾರಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಹಾಗೆ ಅಂಟಿಸಿದ ಮತ್ತು ಹಾಗೆ ಪ್ರಕಟಣೆ ಮಾಡಿದ ತರುವಾಯ ಸಂಬಂಧಪಟ್ಟ ಎಲ್ಲ ವ್ಯಕ್ತಿಗಳಿಗೆ ಅದರಲ್ಲಿ ನಿರೂಪಿಸಿದ ವಿಷಯಗಳನ್ನು ಕ್ರಮಬದ್ಧವಾಗಿ ತಿಳಿಸಲಾಗಿದೆಯೆಂದು ಭಾವಿಸತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 500, 10ನೇ ಮಾರ್ಚ್ 2025

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**SIXTH SESSION**

# THE BRUHAT BENGALURU MAHANAGARA PALIKE (AMENDMENT) BILL, 2025

**(LA Bill No. 17 of 2025)**

A Bill further to amend the Bruhat Bengaluru MahanagaraPalike Act, 2020(Karnataka Act 53 of 2020).

Whereas it is expedient furtherto amend the Bruhat Bengaluru MahanagaraPalike Act, 2020 (Karnataka Act No.53 of 2020) for the purposes hereinafter appearing;

Be it enacted by the Karnataka State Legislature in the Seventy sixth year of the Republic of India as follows:-

**1. Short title and commencement.-** (1) This Act may be called the Bruhat Bengaluru MahanagaraPalike (Amendment) Act, 2025.

(2) It shall come into force at once.

**2. Substitution of section 225.-** In the Bruhat Bengaluru MahanagaraPalike Act, 2020 (Karnataka Act No. 53 of 2020) (hereinafter referred to as the Principal Act) for section 225, the following shall be substituted,namely:-

**"225. Power to declare any street as public street.-** (1) If a private street including the drains are in such a poor condition that endangers public safety and health, the Zonal Commissioner may, with respect to a private street, on his own accord or upon a request by the owners of the said private street or the owners of the buildings and lands fronting or abutting on such a street, by a public notice and notice to such owners, inform his intention to declare the said private street or part thereof, a public street. Thereupon, such owners or anyone else interested, may give objections, if any, regarding the said intention within one month of the date of service of such the public notice by affixture. Upon considering the objections if any, the Zonal Commissioner may, declare such street or part the street to be a public street:

Provided that, in case the private street falls in more than one Zone then the concerned Zonal Commissioners shall jointly issue the notice and thereupon declare the street or part thereof as a public street.

Provided further that, the private street to be declared as public street shall have connectivity from the public road or public street.

(2) On the request of site owners abutting a private street or otherwise such street which was shown by the erstwhile land owner as road in the sale deed made by the land owner and based upon which the abutting building sites were carved

out by the land owner, who has obtained the benefit of such road or street upon by making the sale of abutting building sites and upon such road is declared as public street under sub-section (1), in that event the land owner, shall not be eligible for any type of compensation under the Right to Fair Compensation and Transparency in Land Acquisition, Rehabilitation and Resettlement Act, 2013 (Central Act No. 30 of 2013) or any other law, including Development Rights Certificates under section 14-B of the Karnataka Town and Country Planning Act, 1961 (Karnataka Act 11 of 1963).

**Explanation:-**For the purpose of this section,-

(i) "Erstwhile Land Owner" means the person in whose name the agriculture or converted land stood at the time of selling the sites and includes all those persons claiming under or through him; and

(ii) "Public Street" means any street, road, square, court, alley, passage or riding path over which the public have a right of way maintained by the Corporation or Government or by any public authorities, whether a thoroughfare or not and includes:-

(a) the roadway over any public bridge or causeway;
(b) the footway attached to any such street public bridge or causeway; and
(c) the drains attached to any such street, public bridge or causeway and the land, whether covered or not by any pavement verandah or other structure which lies on either side of the roadway upto the boundaries of the adjacent property, whether that property is private property or property belonging to the Government or the Corporation.

**3. Substitutionof section 226.-** In the Principal Act, for section 226, the following shall be substituted,namely:-

**“226. Power of the Zonal Commissioner to Order work to be carried or carried out himself in default.-** (1) If upon notice under section 225, due to objections or any other reason leads to dropping of the intention to declare the private street or part thereof as the public street but the private street or part thereof requires to be improved, developed or maintained including road side drains for the benefit of persons using the said street as easement right, the Zonal Commissioner may by notice direct such owners to carry out any work which in his opinion may be necessary and within such time as may be specified in such notice.

(2) If such work is not carried out within the time specified in the notice, the Zonal Commissioner may, if he thinks fit, execute it and the expenses incurred shall be paid by owners referred to in sub-section (1) in such properties as may be settled by the Zonal Commissioner:

Provided that the expenses payable if not paid shall be recoverable as the arrears of Property Tax and in the manner as may be prescribed for recovery of property tax arrears.

(3) If the Zonal Commissioner carries out work in accordance with sub-section (2), he, with the requisition of the owners can declare such a street to be a public street and thereupon the street shall vest in the Corporation.

**4. Amendment of section 240A.-** In the Principal Act, in section 240 A,-

(i) in sub section (2),for the words "The Chief Commissioner" the words "The Corporation" shall be substituted.

(ii) in sub-section (3), in clause (A),-

(a) in sub-clause (e), for the figures and word "'1.0 percent", the figures and word "0.10 percent", shall be substituted;and

(b) after sub-clause (j), the following shall be inserted, namely:-

"(k) The ceiling limits of fee and penalty for residential uses shall be 2/3rd the values specified in sub-clauses (a) to (j)".

**5. Amendment of section 248.-** In the Principal Act, in section 248, after sub- section (4), the following shall be inserted, namely.-

"(5) It shall be lawful for the Zonal Commissioner, at any time, before or after making an order of demolition or of the stoppage of the construction or erection of any building or execution of any work, to make an order directing the sealing of such construction or erection or work or of the premises in which such erection or work is being carried on or has been completed, for the purpose of carrying out the provisions of this Act, for preventing from using such construction or erection.

(6) Where any erection or work or any premises in which any erection or work is being carried on, has or have been sealed, the Zonal Commissioner may, for the purpose of demolishing such erection or work in accordance with the provision of this Act, order directing the sealing of such construction or erection of any work to be removed;

(i) No person shall remove such seal except under an order made by the Zonal Commissioner; and

(ii) Notwithstanding anything contained in this Chapter, no appeal shall lie against such an order of sealing."

## STATEMENT OF OBJECTS AND REASONS

It is considered necessary to amend the Bruhat Bengaluru Mahanagara Palike Act, 2020 (Karnataka Act 53 of 2020) to,-

(i) declare any street as public street;

(ii) ascertain development of even private roads with the BBMP area;

(iii) enable the corporation to take decision in the matters related to fixing the rate of fee, levy or penalty in accordance with Article 243X of the Constitution of the India;

(iv) reduce the ceiling limit and to bring fee on parity with scrutiny fee for building license, commencement certificate and occupancy certificate;

(v) reduce the ceiling limit on the rate of fee chargeable for residential building permission;

(vi) to prevent unauthorized construction and prevent the owner or person from using unauthorized building or part of building; and

(vii) certain consequential amendments connected therewith or incidental thereto also made.

Hence, the Bill.

## FINANCIAL MEMORANDUM

There is no extra expenditure involved in the proposed Legislative Measure.

**MEMORANDUM REGARDING DELEGATED LEGISLATION**

| | |
|---|---|
| **Clause: 3** | Sub-clause (2), empowers the State Government to make rules regarding the manner in which the property tax arrear shall be recovered from the owners of property. |

The proposed delegation of legislative power is normal in character.

**D. K. SHIVAKUMAR**
Deputy Chief Minister

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE BRUHAT BENGALURU MAHANAGARA PALIKE ACT, 2020 (KARNATAKA ACT NO. 53 OF 2020)**

**X X XX XX**

**225. Power of the Zonal Commissioner to order work to be carried out or to carry it out himself in default.-** (1) If any private street or part thereof is not levelled, paved, metalled, flagged, channelled, sewered, drained, conserved or lighted to the satisfaction of the Zonal Commissioner, he may by notice require the owners of such street or part and the owners of buildings and lands fronting or abutting on such street or part including in cases where the owners of the land and of the building thereon are different, the owners both of the land and of the building to carry out any work which in his opinion may be necessary and within such time as may be specified in such notice.

(2) If such work is not carried out within the time specified in the notice, the Zonal Commissioner may, if he thinks fit, execute it and the expenses incurred shall be paid by the owner referred to in sub-section (1) in such proportions as may be settled by the Commissioner.

**X X XX XX**

**226. Right of owners to require streets to be declared public.-** If the Zonal commissioner carries out work in accordance with section 225, he, with the requisition of majority of the owners can declare such a street to be a public street and thereupon the street shall vest in the Corporation.

**X X XX XX**

**240A. Levy of imposts, restriction and condition.-**(2) The Chief Commissioner while fixing the rates for levy of fee or penalty shall consider all the costs related to the issue and execution of the approval as he may deem fit.

(3) The Chief Commissioner may for approving or sanctioning the plan or grant of commencement certificate or completion certificate,-

(A) charge and levy the following fee at such rates based on the guidance value fixed by the Department of Stamps and Registration under the provisions of the Karnataka Stamp Act, 1957, namely:-

(a) fee for issuance of license at such rate not exceeding 0.30 percent of guidance value of the vacant site under section 45B of the Karnataka Stamp Act, 1957 (Karnataka Act 34 of 1957) multiplied by the proposed built up area;

(b) fee for maintenance of public roads or storing of construction material in public places during construction viz. ground rent at such rate not exceeding 0.25 percent of guidance value of the vacant site under section 45B of the Karnataka Stamp Act, 1957 (Karnataka Act 34 of 1957) multiplied by the proposed built up area;

(c) security deposit as specified in the zoning regulation for ensuring that the construction is in accordance with the plan sanctioned;

(d) fee for commencement certificate at such rate not exceeding 0.20 percent of guidance value of the vacant site under section 45B of the Karnataka Stamp Act, 1957 (Karnataka Act 34 of 1957) multiplied by the proposed plinth area;

(e) fee for completion certificate at such rate not exceeding 1.0 percent of guidance value of the vacant site under section 45B of the Karnataka Stamp Act, 1957 (Karnataka Act 34 of 1957) multiplied by the proposed built up area;

(f) such other fee as specified by the Government from time to time under this Act and the Karnataka Town and Country Planning Act, 1961 (Karnataka Act 11 of 1963) and the rules made there under;

(g) scrutiny fee at such rate not exceeding 0.10 percent of guidance value of the vacant site under section 45B of the Karnataka Stamp Act, 1957 (Karnataka Act 34 of 1957) multiplied by the proposed built up area;

(h) penalty imposed at the time of issuance of completion certificate for not obtaining commencement certificate at the commencement of the construction at such rate not exceeding 0.25 percent of guidance value of the vacant site under section 45B of the Karnataka Stamp Act, 1957 (Karnataka Act 34 of 1957) multiplied by constructed built up area;

(i) penalty for regularisation of violated or deviated portion of construction up to the extent allowed under the Act at such rate not exceeding 35 percent of the guidance value of site under section 45B of the Karnataka Stamp Act, 1957 (Karnataka Act 34 of 1957) for the violated portion;

(j) such other fee as may be specified by the Government from time to time.

**X X XX XX**

**248. Demolition or alteration of buildings or well work unlawfully commenced, carried on or completed.-**

**X X XX XX**

(4) If the construction or reconstruction of any building or hut is commenced contrary to the provisions of section 240 and the Zonal Commissioner is of the opinion that immediate action should be taken, then, notwithstanding anything contained in this Act, a notice to be given under sub-section (2) shall not be of less duration than twenty-four hours and shall be deemed to be duly served if it is affixed in some conspicuous part of the building or hut to which the notice relates and published by proclamation at or near such building accompanied by beat of drum, and upon such affixation and publication, all persons concerned shall be deemed, to have been duly informed of the matters stated therein.

**X X XX XX**

Govt. Press, Vikasa Soudha, Bengalur, 17th Mar, 2025, P7, W.D. , Copies 500